# ಪಟ್ಟೆ ತಲೆ ಹೆಬ್ಬಾತು



■ ಚಿತ್ರಬರಹ:
**ಅನಂತ್ ಎಚ್.ವಿ.**



**ಕ**ರ್ನಾಟಕದಲ್ಲಿ ಪಕ್ಷಿಗಳಿಗೆ ಬರವಿಲ್ಲ. ಬಯಲುಸೀಮೆಯಿಂದ ಹಿಡಿದು ಪಶ್ಚಿಮ ಘಟ್ಟದ ದಟ್ಟ ಕಾನನದಲ್ಲಿ ವೈವಿಧ್ಯಮಯ ಪಕ್ಷಿಲೋಕವಿದೆ. ಇದೂ ಅಲ್ಲದೆ ಕಡಲಾಚೆಯಿಂದ, ಹಿಮಾಲಯದ ಆಚೆಯಿಂದಲೂ ಹಕ್ಕಿಗಳು ವಲಸೆ ಬರುತ್ತವೆ. ಋತು ಬದಲಾದಂತೆ, ಅದೆಲ್ಲಿಂದಲೋ ಸಾವಿರಾರು ಕಿ.ಮೀ ಕ್ರಮಿಸಿ ಇಲ್ಲಿಗೆ ಬಂದು, ಇಲ್ಲೇ ಮೊಟ್ಟೆಯಿಟ್ಟು ಮರಿ ಮಾಡಿ, ಚಳಿಗಾಲ ಮುಗಿದ ಬಳಿಕ ಹಾರಿ ಹೋಗುವ ಹಕ್ಕಿಗಳದ್ದೇ ಇನ್ನೊಂದು ಲೋಕ.

ಒಮ್ಮೆ ಹಾಸನದ ಹೊರವಲಯದ ಊರೊಂದರಲ್ಲಿ ಪಕ್ಷಿವೀಕ್ಷಣೆಗೆಂದು ಹೋಗಿದ್ದೆ. ಅಲ್ಲಿ ನೀರಿನ ತಟದಲ್ಲಿ ವಾಸ ಮಾಡುವ ಹಲವಾರು ಹಕ್ಕಿಗಳಿವೆ. ಅದು ಚಳಿಗಾಲದ ಸಮಯ, ಸಂಜೆ ಐದಾಗಿತ್ತು. ಇದ್ದಕ್ಕಿದ್ದಂತೆ ಆಕಾಶದಲ್ಲಿ ನೂರಾರು ಹಕ್ಕಿಗಳ ಗುಂಪೊಂದು ಹಾರಿ ಬಂದವು. ನೀರಿನ ಸುತ್ತ ಶಿಸ್ತಾಗಿ ಕುಳಿತವು. ಯಾವ ಹಕ್ಕಿಯೆಂದು ಅವತ್ತು ಮೊದಲ ನೋಟಕ್ಕೆ ಗೊತ್ತಾಗಲಿಲ್ಲ. ಫೋಟೋಗಳನ್ನು ಕ್ಲಿಕ್ಕಿಸಿದೆ. ಮನೆಗ ಹೋಗಿ ಡಾ.ಸಲೀಂ ಅಲಿಯವರ ಪುಸ್ತಕ ಬಿಡಿಸಿ ನೋಡಿದರೆ, ಅವು ಪಟ್ಟೆ ತಲೆ ಹೆಬ್ಬಾತು ಎಂದು ಗೊತ್ತಾಯಿತು. ಪ್ರಪಂಚದಲ್ಲೇ ಅತ್ಯಂತ ಎತ್ತರದಲ್ಲಿ ಹಾರುವ ಹಕ್ಕಿಗಳಿವು. ಇಂಗ್ಲಿಷ್‌ನಲ್ಲಿ 'ಬಾರ್ ಹೆಡೆಡ್ ಗೂಸ್' ಎಂದು ಕರೆಯುತ್ತಾರೆ.

ಇವು ಮಧ್ಯ ಏಷ್ಯಾದಿಂದ ಪ್ರತಿ ವರ್ಷ ಚಳಿಗಾಲಕ್ಕೆ ಭಾರತಕ್ಕೆ ವಲಸೆ ಬರುವ ಹಕ್ಕಿಗಳು. ಹಿಮಾಲಯ ಶಿಖರಗಳನ್ನು ಅನಾಯಾಸವಾಗಿ ದಾಟಿಕೊಂಡು ಬರುವ ಇವು ಉತ್ತರದ ಅಸ್ಸಾಂನಿಂದ ದಕ್ಷಿಣದ ತಮಿಳುನಾಡಿನವರೆಗೂ ಬರುತ್ತವೆ. ಇವುಗಳ ವಿಶಿಷ್ಟ ದೇಹರಚನೆ ಹಾಗೂ ರಕ್ತದಲ್ಲಿ ಹೆಚ್ಚು ಪ್ರಮಾಣದಲ್ಲಿ ಪೂರೈಕೆಯಾಗುವ ಆಮ್ಲಜನಕದಿಂದಾಗಿ, ಅತೀ ಎತ್ತರದಲ್ಲಿ ಹಾರಾಡಲು ಈ ಹಕ್ಕಿಗಳಿಗೆ ಅನುಕೂಲವಾಗಿದೆ.

ವಲಸೆ ಬರುವ ಒಂದು ಗುಂಪಿನಲ್ಲಿ ಸಾವಿರಾರು ಹಕ್ಕಿಗಳನ್ನು ಕಾಣಬಹುದು. ಅಕ್ಟೋಬರ್ ಹೊತ್ತಿಗೆ ವಲಸೆ ಬರುವ ಇವು ಚಳಿಗಾಲವನ್ನು ಕಳೆಯಲು ಪ್ರಶಾಂತವಾಗಿರುವ ನದಿ ಮತ್ತು ಕೆರೆ ತಟಗಳನ್ನು ಆರಿಸಿಕೊಳ್ಳುತ್ತವೆ. ಅತೀ ಸಂಕೋಚ ಸ್ವಭಾವದ ಹಕ್ಕಿಗಳಾದ ಇವುಗಳಿಗೆ ಮನುಷ್ಯರನ್ನು ಕಂಡರೆ ತೀರಾ ಭಯ. ಇವುಗಳ ಫೋಟೋ ತೆಗೆಯುವುದಂತೂ ಬಹಳ ಕಷ್ಟದ ಕೆಲಸ.

ಬೆಳಗಿನ ಹೊತ್ತು ವಿಶ್ರಮಿಸುವ ಇವು, ರಾತ್ರಿಯಲ್ಲಿ ಆಹಾರ ಹುಡುಕುತ್ತವೆ. ಸಸ್ಯಾಹಾರಿಗಳಾದ ಇವುಗಳಿಗೆ ಬಾರ್ಲಿ, ಗೋಧಿ ಹಾಗೂ ಇನ್ನಿತರ ಚಳಿಗಾಲದ ಬೆಳೆಗಳ ಹಸಿರು ಚಿಗುರುಗಳೇ ಪ್ರಮುಖ ಆಹಾರ. ಮಾರ್ಚ್ ತಿಂಗಳಲ್ಲಿ ಸ್ವಸ್ಥಾನಕ್ಕೆ ಮರಳುತ್ತವೆ. ಬೇಸಿಗೆ ಕಾಲದಲ್ಲಿ ಟಿಬೆಟ್ ಮತ್ತು ಲಡಾಖ್‌ನಲ್ಲಿ ಸಂತಾನೋತ್ಪತ್ತಿ ಮಾಡುವುದೂ ಇದೆ. ನೋಡಲು ಗಂಡು ಮತ್ತು ಹೆಣ್ಣು ಹಕ್ಕಿಗಳು ಒಂದೇ ರೀತಿ ಕಾಣಿಸುತ್ತವೆ. ●